**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.</u>**

**ರಾಜ್ಯದಲ್ಲಿ 'ಸಿ' ಗ್ರೇಡ್ ದೇಗುಲಗಳನ್ನು ಸರ್ಕಾರ ಸಂಪೂರ್ಣ ಕಡೆಗಣಿಸಿರುವುದರಿಂದ, ಬಹುತೇಕ ದೇವಾಲಯಗಳು ಶಿಥಿಲಾವಸ್ಥೆ ತಲುಪಿದ್ದು, ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ಸದರಿ 'ಸಿ' ಗ್ರೇಡ್ ದೇಗುಲಗಳಿಗೆ ನಿರ್ವಹಣೆ ಮಾಡಲು ಬೇಕಾದ ಆದಾಯ ಇಲ್ಲದಿರುವುದರಿಂದ ಶಿಥಿಲಗೊಂಡರೆ ಸರಿಪಡಿಸಲು, ಕಳೆಗುಂದಿದರೆ ಬಣ್ಣ ಬಳಿಸಲೂ ಆಗದ ಪರಿಸ್ಥಿತಿ ಇದ್ದು ಬಹುತೇಕ ಗ್ರಾಮೀಣ ದೇವಾಲಯಗಳು ಪಾಳು ಬೀಳುವ ದುಸ್ಥಿತಿ ತಲುಪಿವೆ. ರಾಜ್ಯದಲ್ಲಿರುವ 'ಸಿ' ಗ್ರೇಡ್ ದೇಗುಲಗಳ ಜೀರ್ಣೋದ್ಧಾರಕ್ಕೆ, ಅಭಿವೃದ್ಧಿಗೆ, ನಿರ್ವಹಣೆಗೆ ಮತ್ತು ಸದರಿ ದೇವಾಲಯಗಳಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಅಗತ್ಯವಾಗಿ ಬೇಕಾಗಿರುವ ಅನುದಾನವನ್ನು ಒದಗಿಸಲು ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ನಿಯಮ 330ರ ಅಡಿಯಲ್ಲಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆದಿರುತ್ತಾರೆ.**

**<u>ಉತ್ತರ:-</u>**

ಪ್ರತಿ ವರ್ಷವು ಸರ್ಕಾರ ದೇವಾಲಯಗಳ ಅಭಿವೃದ್ಧಿ, ಜೀರ್ಣೋದ್ಧಾರ ಮತ್ತು ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡುತ್ತಿದ್ದು, ಈ ಅನುದಾನ ಬಿಡುಗಡೆಗೆ ಮಾನ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರಿಂದ ಕೋರಿಕೆ ಪತ್ರಗಳು ಸ್ವೀಕೃತವಾಗುತ್ತಿದ್ದು, ಇದರಲ್ಲಿ ಬಹುತೇಕ ಖಾಸಗಿ ದೇವಾಲಯಗಳಿಗೆ ಅನುದಾನ ಕೋರಲಾಗುತ್ತಿದೆ. ಆದರೆ, ಮಾನ್ಯ ಶಾಸಕರುಗಳು 'ಸಿ' ವರ್ಗದ ಮುಜರಾಯಿ ದೇವಾಲಯಗಳ ಜೀರ್ಣೋದ್ಧಾರಕ್ಕೂ ಸಹ ಅನುದಾನ ಕೋರಿದಲ್ಲಿ 'ಸಿ' ವರ್ಗಗಳ ದೇವಾಲಯಗಳ ಜೀರ್ಣೋದ್ಧಾರಕ್ಕೆ ಅನುದಾನ ಮಂಜೂರು ಮಾಡುವ ಮುಖಾಂತರ ಅವುಗಳ ಜೀರ್ಣೋದ್ಧಾರಕ್ಕೆ ಹೆಚ್ಚು ಸಹಕಾರಿಯಾಗಲಿದೆ.

ರಾಜ್ಯದಲ್ಲಿ 34168 'ಸಿ' ವರ್ಗದ ದೇವಾಲಯಗಳಿರುತ್ತವೆ. ಸರ್ಕಾರವು ಈ ದೇವಾಲಯಗಳ ಜೀರ್ಣೋದ್ಧಾರ/ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ಕ್ರಮ ವಹಿಸಿರುತ್ತದೆ:-

1. 2025-26ನೇ ಸಾಲಿನಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯ 'ಸಿ' ವರ್ಗದ ಅಧಿಸೂಚಿತ ಸಂಸ್ಥೆಗಳ ಮೂಲಭೂತ ಸೌಕರ್ಯ ಒದಗಿಸಲು ಲೆಕ್ಕಶೀರ್ಷಿಕೆ: "4059-80-051-0-52-386 ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ವಸತಿ ವ್ಯವಸ್ಥೆ-ಕಟ್ಟಡಗಳ ಖರೀದಿ ಮತ್ತು ನಿರ್ಮಾಣ" ಇದರಡಿಯಲ್ಲಿ ರೂ.1000.00 ಲಕ್ಷಗಳನ್ನು ಸರ್ಕಾರದಿಂದ ಮೀಸಲಿರಿಸಲಾಗಿರುತ್ತದೆ.

2. 2022-23ನೇ ಸಾಲಿನಲ್ಲಿ ಕಾಯಕಲ್ಪ ಯೋಜನೆಯಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 138 ಮುಅಬಿ 2023 ದಿನಾಂಕ:27.03.2023ರಲ್ಲಿ 84 ವಿವಿಧ ಮುಜರಾಯಿ ದೇವಾಲಯಗಳಿಗೆ ರೂ.800.00 ಲಕ್ಷಗಳ ಹಾಗೂ ಸರ್ಕಾರದ ಆದೇಶ ಸಂಖ್ಯೆ: RD 315 MABI 2022(ಭಾಗ-2) ದಿನಾಂಕ:20.03.2023ರಲ್ಲಿ 33 ವಿವಿಧ ಮುಜರಾಯಿ ದೇವಾಲಯಗಳಿಗೆ ರೂ.235.00ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

3. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 21 (ಎಫ್) ರಡಿಯಲ್ಲಿ ದೊಡ್ಡ ಸಂಸ್ಥೆಯು ಅಥವಾ ಧರ್ಮಾದಾಯ ಸಂಸ್ಥೆಯು ರೂ.2.00 ಲಕ್ಷ ರೂಪಾಯಿಗಳು ಮತ್ತು ಅದಕ್ಕೂ ಕಡಿಮೆ ಆದಾಯವನ್ನು ಹೊಂದಿರುವ ಅಧಿಸೂಚಿತ ಸಂಸ್ಥೆಯನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಇದರಂತೆ ಈವರೆವಿಗೂ 10 'ಸಿ' ವರ್ಗದ ದೇವಾಲಯಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಲಾಗಿರುತ್ತದೆ. ಮುಂದೆಯೂ ಸಹ ಇಂತಹ ಕೋರಿಕೆಗಳು ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದು.

4. 'ಸಿ' ವರ್ಗದ ದೇವಾಲಯಗಳನ್ನು ಅಭಿವೃದ್ಧಿ ಪಡಿಸಲು ಖಾಸಗಿ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳು, ಟ್ರಸ್ಟ್‌ಗಳು ಮತ್ತು ಮಠಗಳು ಮುಂದೆ ಬಂದಲ್ಲಿ, ಸದರಿ ದೇವಾಲಯಗಳ ಅಭಿವೃದ್ಧಿಕೈಗೊಳ್ಳಲು ಮುಕ್ತ ಅವಕಾಶವಾಗುವಂತೆ ಅನುಮತಿಯನ್ನು ನೀಡಲಾಗುವುದು.

5. ಇದಲ್ಲದೇ, ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 60 ಮುಸೇವಿ 2023 ದಿನಾಂಕ:18.10.2023 ರಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 69 ರಡಿಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ದೇವಾಲಯಗಳ ಜೀರ್ಣೋದ್ಧಾರ ಮತ್ತು ಪುನರ್ ನಿರ್ಮಾಣ ಕಾಮಗಾರಿ ಕೈಗೊಳ್ಳುವ ಪೂರ್ವದಲ್ಲಿ ಅನುಮತಿ ಪಡೆಯಲು ವಾಸ್ತು ಶಿಲ್ಪ ಸಮಿತಿಯನ್ನು ರಚಿಸಲಾಗಿರುತ್ತದೆ. ರಾಜ್ಯದ ವಿವಿಧ ಜಿಲ್ಲಾಧಿಕಾರಿಗಳಿಂದ ಶಿಥಿಲಾವಸ್ಥೆಯಲ್ಲಿರುವ ಅಧಿಸೂಚಿತ ಸಂಸ್ಥೆಗಳನ್ನು ಜೀರ್ಣೋದ್ಧಾರ / ಪುನರ್ ನಿರ್ಮಾಣಕ್ಕೆ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈವರೆವಿಗೂ 38 ಅಧಿಸೂಚಿತ ಸಂಸ್ಥೆಗಳನ್ನು ದಾನಿಗಳಿಂದ/ಖಾಸಗಿ ವ್ಯಕ್ತಿಗಳಿಂದ ಜೀರ್ಣೋದ್ಧಾರ/ಪುನರ್ ನಿರ್ಮಾಣ ಮಾಡುವ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್ ರವರ ಮೇಲುಸ್ತುವಾರಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿಯನ್ನು ನೀಡಲಾಗಿರುತ್ತದೆ.

ಸಂಖ್ಯೆ:ಕಂಇ 140 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು